**ದಿನಾಂಕಃ 09–06–2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀಮತಿ ಎನ್ ಎ ಎಸ್ ವಕೀಲರಿಂದಃ**

1. ನಾನು ಈ ದಿನ ಮುಖ್ಯ ವಿಚಾರಣೆಗಾಗಿ ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಆರ್ ವಿ ಆರ್ ವಕೀಲರಿಂದಃ**

2. ನಿಶಾನೆ ಎಮ್ -5 ರ ಮೇಲೆ ರುಜು ಮಾಡಲು ನನಗೆ ಕಂಪನಿ ಅಧಿಕಾರ ಕೊಟ್ಟಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನಾನು ಆ ರೀತಿ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಹೌದು. ನಾನು ಬೆಳಿಗ್ಗೆ 8.30 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಕೆಲಸ ಮಾಡುತ್ತೇನೆ. ಅರ್ಜಿದಾರ ದಿಃ 10.09.2015 ರಂದು 2 ಪಾಳಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನಮ್ಮ ಕಂಪನಿಯಲ್ಲಿ ಪಾಳಿ ಸಮಯ ಮುಗಿದ ಮೇಲೆ ಹೆಚ್ಚುವರಿ ಸಮಯ ನೌಕರ ಕೆಲಸ ಮಾಡಲು ಅವಕಾಶ ಇದೆ ಎಂದರೆ ಹೌದು. ನೌಕರರಿಗೆ ಉತ್ಪಾದನಾ ಗುರಿಯನ್ನು ನೀಡಲಾಗುತ್ತದೆ ಎಂದರೆ ಹೌದು. ದಿನಾಂಕಃ 10.09.2015 ರಂದು ಅರ್ಜಿದಾರ ಅವನಿಗೆ ನೀಡಿದ ಉತ್ಪದನಾ ಗುರಿಯನ್ನು ಮುಟ್ಟಿಲ್ಲ ಎಂದು ನಾನು ಆಡಳಿತ ಮಂಡಳಿಗೆ ವರದಿ ಕೊಟ್ಟಿಲ್ಲ, ಆದರೆ ಮೇಲ್ವಿಚಾರಕನಿಗೆ ತಿಳಿಸಿದ್ದೇನೆ. ಮೇಲ್ವಿಚಾರಕ ನನ್ನ ಅಧೀನದಲ್ಲಿ ಕೆಲಸ ಮಾಡುತ್ತಾನೆ. ನಮ್ಮ ಕಂಪನಿ ಹಾಜರುಪಡಿಸಿರುವ ದಾಖಲಾತಿ ಯಾವುದು ನನ್ನ ಗಮನಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನಮ್ಮ ಕಂಪನಿಯಲ್ಲಿ ನೌಕರರನ್ನು ತೆಗೆದು ಹಾಕಲು ನಿಯಮಾವಳಿ ಇದೆ ಎಂದರೆ ಹೌದು. ನೌಕರರನ್ನು ತೆಗೆದು ಹಾಕುವವುದಕ್ಕಿಂತ ಮೊದಲು ಆಂತರಿಕ ತನಿಖೆಯನ್ನು ಕಂಪನಿಯು ಮಾಡುತ್ತದೆ. ಅರ್ಜಿದಾರನಿಗೆ ಸಂಬಂಧಪಟ್ಟಂತೆ ಕಂಪನಿಯ ಮಾನವ ಸಂಪನ್ಮೂಲ ವಿಭಾಗ ತನಿಖೆ ಮಾಡಿದೆ. ಅರ್ಜಿದಾರ ಅಶಿಸ್ತಿನಿಂದ ನಡೆದುಕೊಂಡಿದ್ದಾನೆ ಎಂದು ನಾನು ವರದಿಯನ್ನು ಕೊಟ್ಟಿದ್ದೇನೆ. ನಾನು ವರದಿ ಕೊಟ್ಟಿರುವ ಬಗ್ಗೆ ನಾನು ರುಜು ಹಾಕಿರುವ ಯಾವುದೇ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಹೌದು .

3. ನಾನು ಮತ್ತು ಅರ್ಜಿದಾರ ಒಂದೇ ಸಮಯಕ್ಕೆ ನೌಕರಿಗೆ ಸೇರಿದೆವು ಎಂದರೆ ಹೌದು. ನಾನು ಅರ್ಜಿದಾರನ ವಿರುದ್ಧ ವೈಯಕ್ತಿಕ ದ್ವೇಷ ಸಾಧಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಅರ್ಜಿದಾರನ ವಿರುದ್ಧ ನಮ್ಮ ಕಂಪನಿಯಿಂದ ಕ್ರಿಮಿನಲ್ ಮೊಕದ್ದಮೆ ದಾಖಲು ಆಗಿರುವುದಿಲ್ಲ. ಈ ದಿನ ಹಾಕಿರುವ ಪ್ರಮಾಣ ಪತ್ರದಲ್ಲಿ ಅರ್ಜಿದಾರನ ಅಶಿಸ್ತಿನ ಬಗ್ಗೆ ಯಾವುದೇ ಉಲ್ಲೇಖ ಇಲ್ಲ ಎಂದರೆ ಹೌದು . ನಾನು ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಅರ್ಜಿದಾರನಿಗೆ ಪರಿಹಾರ ಸಿಗಬಾರದು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಂಪನಿಯಿಂದ ಅರ್ಜಿದಾರನ ವಿರುದ್ಧ ಯಾವುದೇ ಆಂತರಿಕ ತನಿಖೆ ನಡೆಸಿಲ್ಲ ಎಂದರೆ ಸರಿಯಲ್ಲ. ನಮ್ಮ ಕಂಪನಿ ಅರ್ಜಿದಾರನನ್ನು ಕಾನೂನು ಬಾಹಿರವಾಗಿ ವಜಾ ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.